ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳ ಮೂಲಭೂತ ಸೌಕರ್ಯದ ಬಗ್ಗೆ

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶನ ಹೊಂದಿದವರು) -

56 (55)ಎ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕೋವಿಡ್-19ರ ರೋಗ ಘೋಷಣೆಯಾಗುವ ಪೂರ್ವದಲ್ಲಿ ರಾಜ್ಯಾದ್ಯಂತ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಇದ್ದಂತಹ ಮೂಲಭೂತ ಸೌಕರ್ಯಗಳಾವುವು (ಐ.ಸಿ.ಯು, ವೆಂಟಿಲೇಟರ್, ಡಯಾಲಿಸೀಸ್ ಇತ್ಯಾದಿ) ಅದೇ ಆಸ್ಪತ್ರೆಗಳಲ್ಲಿ ಪ್ರಸ್ತುತ ಇರುವ ಮೂಲಭೂತ ಸೌಕರ್ಯಗಳಾವುವು; (ಜಿಲ್ಲಾವಾರು, ತಾಲ್ಲೂಕುವಾರು ಆಸ್ಪತ್ರೆವಾರು, ತುಲನಾತ್ಮಕ ಪಟ್ಟಿ ಒದಗಿಸುವುದು)

(ಆ) ಕೋವಿಡ್ ರೋಗಿಗಳ ಚಿಕಿತ್ಸಾ ವೆಚ್ಚಕ್ಕಾಗಿ ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಿಗೆ ಮರು ಪಾವತಿ ಮಾಡಲಾದ ಮೊತ್ತ ಎಷ್ಟು; (ಆಸ್ಪತ್ರೆವಾರು ವಿವರ ಒದಗಿಸುವುದು) ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಮರು ಪಾವತಿ ಮಾಡಲಾದ ಮೊತ್ತ ಎಷ್ಟು; (ಆಸ್ಪತ್ರೆವಾರು ವಿವರ ಒದಗಿಸುವುದು)

(ಇ) ರಾಜ್ಯಾದ್ಯಂತ ಜಿಲ್ಲಾವಾರು ನಿರ್ವಹಿಸಲಾದ ಕೋವಿಡ್ ಕೇರ್ ಕೇಂದ್ರಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಆರೈಕೆ ಪಡೆದ ರೋಗಿಗಳ ಸಂಖ್ಯೆ ಮತ್ತು ಆರೈಕೆಗಾಗಿ ವೆಚ್ಚ ಮಾಡಲಾದ ಅನುದಾನ ಎಷ್ಟು? (ಜಿಲ್ಲಾವಾರು, ಆರೈಕೆ ಕೇಂದ್ರವಾರು ಮಾಹಿತಿ ಒದಗಿಸುವುದು)